ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) ದಕ್ಷಿಣ ಕನ್ನಡ ಸಹಕಾರ ಸಕ್ಕರೆ ಕಾರ್ಖಾನೆ(ನಿ) ಬ್ರಹ್ಮಾವರ, ಉಡುಪಿ ಜಿಲ್ಲೆ ಇದರ 2002–03ನೇ ಸಾಲಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಕೇಂದ್ರ ಸರ್ಕಾರದ ಆದೇಶ ಸಂ.ಜಿ.ಎಸ್.ಆರ್–19 (ಇ) ಇಎಸ್ಎಸ್/ಕಾಂ/ಶುಗರ್ಕೇಸ್/ ದಿ: 9–1–03ರಲ್ಲಿ ಶಾಸನಬದ್ಧ ಕನಿಷ್ಟ ಬೆಲೆ ನಿಗದಿಪಡಿಸಿದಂತೆ ಟನ್ 1ಕ್ಕೆ ರೂ. 736.00 ರಂತೆ ಪಾವತಿಸಲಾಗುತ್ತಿದೆ. ಪ್ರತಿವರ್ಷ ಕಬ್ಬಿನ ಖರೀದಿ ದರದಲ್ಲಿ ಬದಲಾವಣೆ ಇರುತ್ತದೆ. ಹಿಂದಿನ ಸಾಲಿನಲ್ಲಿ ರೂ.800/– ರಂತೆ ಪಾವತಿಸಲಾಗಿದೆ.

ಆ) 2001–02ನೇ ಸಾಲಿಗೆ 55,328 ಟನ್ ಮತ್ತು 2002–03ನೇ ಸಾಲಿಗೆ 57.369 ಟನ್ ಕಬ್ಬನ್ನು ರೈತರಿಂದ ಪಡೆಯಲಾಗಿದೆ.

ಇ) ರೈತರು ಕಾರ್ಖಾನೆಗೆ ಕಬ್ಬು ಒದಗಿಸಿದ ಬಾಬ್ತು 2001–02 ಮತ್ತು 2002–03ನೇ ಸಾಲಿನ ಬಾಬ್ತು ರೂ. 325.02 ಲಕ್ಷಗಳು ಪಾವತಿಗೆ ಬಾಕಿ ಇರುತ್ತದೆ. ವರ್ಷಾವಾರು ವಿವರ ಈ ಕೆಳಗಿನಂತಿದೆ:

2001–02	–	ರೂ. 96.00 ಲಕ್ಷ
2002–03	–	ರೂ. 229.02 ಲಕ್ಷ

ಈ) ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ(ನಿ) ಬ್ರಹ್ಮಾವರ. ಇದರ ಕಬ್ಬು ಅರೆಯುವಿಕೆಯು ಪ್ರಾರಂಭದಿಂದಲೂ ಅರೆತಕ್ಕೆ ಬೇಕಾದಷ್ಟು ಪ್ರಮಾಣದ ಕಬ್ಬು ದೊರೆಯದ ಕಾರಣ ಕಾರ್ಖಾನೆಯು ಪ್ರಾರಂಭದಿಂದಲೂ ನಷ್ಟವನ್ನು ಹೊಂದುತ್ತ ಬಂದಿರುತ್ತದೆ. ಹೀಗಾಗಿ ಕಾರ್ಖಾನೆಯ ತೀವ್ರವಾದ ಆರ್ಥಿಕ ತೊಂದರೆಯಿಂದಾಗಿ 2001–02 ಮತ್ತು 2002–03ನೇ ಸಾಲಿನ ಕಬ್ಬು ಸರಬರಾಜು ರೈತರಿಗೆ ಹಣ ಪೂರ್ತಿಯಾಗಿ ಪಾವತಿಸಲು ಕಾರ್ಖಾನೆಗೆ ಸಾಧ್ಯವಾಗಿರುವುದಿಲ್ಲ.

ಉ) ಕಾರ್ಖಾನೆಯು ದಿನಾಂಕ : 31–3–2002ಕ್ಕೆ ರೂ. 33.74 ಕೋಟಿಗಳ ಕ್ರೋಢೀಕೃತ ನಷ್ಟವನ್ನು ಹೊಂದಿದೆ. ಮುಂದೆ ಸಾಮರ್ಥ್ಯಕ್ಕನುಗುಣವಾಗಿ ಕಬ್ಬು ಲಭ್ಯವಾದರೆ, ನಷ್ಟ ನಿಭಾಯಿಸಲು ಪ್ರಯತ್ನಿಸಲಾಗುವುದು.

ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ರೈತರಿಗೆ ಹಣ ಪಾವತಿಸದೇ ಇರುವ ಬಗ್ಗೆ

473(4145) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯವರು ರೈತರಿಗೆ ಕಬ್ಬಿನ ಬಿಲ್ಲನ್ನು ಕೊಡದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಹಣವನ್ನು ಕೊಡಬೇಕಾಗಿರುವುದು ಹಾಗೂ ಇನ್ನೂ ಎಷ್ಟು ದಿವಸಗಳಲ್ಲಿ ಬಿಲ್ಲನ್ನು ಕೊಡಲಾಗುವುದು;

ಆ) ರೈತರು ಕಾರ್ಖಾನೆಗೆ ಕಬ್ಬು ಪೂರೈಸಿದ ಎಷ್ಟು ದಿವಸಗಳೊಳಗಾಗಿ ಬಿಲ್ಲನ್ನು ಕೊಡಬೇಕೆಂದು ನಿಯಮ ಇರುವುದು;

ಇ) ಅವಧಿ ಒಳಗಾಗಿ ಬಿಲ್ಲನ್ನು ಕೊಡದೇ ಇದ್ದಲ್ಲಿ ರೈತರಿಗೆ ಕಾರ್ಖಾನೆಯಿಂದ ಬಡ್ಡಿ ಕೊಡಲು ಕ್ರಮ ಕೈಗೊಳ್ಳಲಾಗುವುದೇ;

ಈ) ಕಾರ್ಖಾನೆಯವರು ಒಟ್ಟು ಎಷ್ಟು ಹಣ ರೈತರಿಗೆ, ನೌಕರದಾರರಿಗೆ ಮತ್ತು ಬ್ಯಾಂಕಿನವರಿಗೆ ಕೊಡಬೇಕಾಗಿರುವುದು; ಎಷ್ಟು ಮೊತ್ತದ ಸಕ್ಕರೆ ಕಾರ್ಖಾನೆಯಲ್ಲಿರುವುದು; ಕಾರ್ಖಾನೆಯಲ್ಲಿ ಸಕ್ಕರೆ ಮಾರಿದರೂ ಕೂಡ ಇನ್ನೂ ಸಾಲ ತೀರಿಸಲು ಎಷ್ಟು ಹಣ ಬೇಕಾಗುವುದು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) 2002–03ನೇ ಹಂಗಾಮಿನಲ್ಲಿ ದಿನಾಂಕ :16.1.2003ರಿಂದ 22.2.2003ರವರೆಗೆ ಪೂರೈಕೆಯಾದ ಕಬ್ಬಿಗೆ ರೂ. 699.58 ಲಕ್ಷ ಪಾವತಿಸಲು ಬಾಕಿ ಇರುತ್ತದೆ. ಕಾರ್ಖಾನೆಯು ಮಧ್ಯಮಾವಧಿ ಸಾಲ ಮಂಜೂರಾತಿಗಾಗಿ ನಬಾರ್ಡ್‌ಗೆ ಅರ್ಜಿ ಸಲ್ಲಿಸಿದ್ದು, ಅದು ಮಂಜೂರಾದ ನಂತರ ಬೆಳಗಾವಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮತ್ತು ಸಮೂಹ ಬ್ಯಾಂಕಿನಿಂದ ಸಾಲ ಬಿಡುಗಡೆಯಾದ ಕೂಡಲೇ ಕಬ್ಬಿನ ಬಿಲ್ಲನ್ನು ಬಟವಾಡೆ ಮಾಡಲು ಕಾರ್ಖಾನೆಯು ಉದ್ದೇಶಿಸಿರುತ್ತದೆ.

ಆ) ಕಬ್ಬು ನಿಯಂತ್ರಣ ಆದೇಶ 1966ರ ಉಪಕಲಮು–3(3–ಎ) ರನ್ವಯ ರೈತರಿಗೆ ಕಬ್ಬು ಸರಬರಾಜು ಮಾಡಿದ 14 ದಿವಸಗಳಲ್ಲಿ ಬಿಲ್ಲು ಪಾವತಿ ಮಾಡಬೇಕೆಂಬ ನಿಯಮವಿರುತ್ತದೆ.

ಇ) ಕಬ್ಬು ನಿಯಂತ್ರಣ ಆದೇಶ 1966ರ ಉಪ ಕಲಂ 3(3ಎ) ರನ್ವಯ ಕಬ್ಬು ಖರೀದಿ ಮಾಡಿದ 14 ದಿವಸಗಳೊಳಗಾಗಿ ಕಬ್ಬಿನ ಬಿಲ್ಲು ಪಾವತಿಸದಿದ್ದಲ್ಲಿ, ಶೇ. 15ರಂತೆ ಬಡ್ಡಿ ಪಾವತಿಸಲು ನಿಯಮದಲ್ಲಿ ಅವಕಾಶವಿದೆ. ಆದರೆ, ಈ ವರ್ಷ ಸಕ್ಕರೆ ಬೆಲೆ ತೀವ್ರ ಕುಸಿತದಿಂದ ಹಲವಾರು ಸಕ್ಕರೆ ಕಾರ್ಖಾನೆಗಳು ಬಿಲ್ಲು ಪಾವತಿಸಲು ತೊಂದರೆ ಪಡುತ್ತಿವೆ.

ಈ) ಕಾರ್ಖಾನೆಯು ರೈತರಿಗೆ, ನೌಕರದಾರರಿಗೆ ಮತ್ತು ಬ್ಯಾಂಕಿಗೆ ಕೊಡಬೇಕಾಗಿರುವ ಸಾಲ ಬಾಕಿ ಸಕ್ಕರೆ ದಾಸ್ತಾನು ಮೊತ್ತದ ವಿವರಗಳು ಈ ಕೆಳಗಿನಂತಿವೆ:

			(ರೂ. ಲಕ್ಷಗಳಲ್ಲಿ)
1)	ರೈತರಿಗೆ ಕಬ್ಬಿನ ಬಿಲ್ಲು ಬಾಕಿ	–	699.58
2)	ನೌಕರರಿಗೆ	–	ಬಾಕಿ ಇಲ್ಲಾ
3)	ಬ್ಯಾಂಕಿನವರಿಗೆ ಒತ್ತೆ ಸಾಲ	–	2468.00
4)	ಸಕ್ಕರೆ ದಾಸ್ತಾನು ಮೊತ್ತ	–	3180.00

ಕಾರ್ಖಾನೆಯು ಸಕ್ಕರೆ ದಾಸ್ತಾನು ಮಾರಾಟ ಮಾಡಿದ ಹಣದಲ್ಲಿ ಸಾಲ ತೀರಿಸಲು ಕೊರತೆ ಬೀಳಲಾರದು.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಈ ಕಬ್ಬು ಸರಬರಾಜು ಮಾಡಿದವರಿಗೆ ಸಾಧಾರಣ ಎರಡು ಕೋಟಿ ಇಪ್ಪತ್ತೇಳು ಲಕ್ಷ ರೂಪಾಯಿಗಳನ್ನು ಬಾಕಿ ಇಟ್ಟಿದ್ದಾರೆ. ಅವರುಗಳು ಬ್ಯಾಂಕ್‌ನಿಂದ ಸಾಲವನ್ನು ತಂದಿದ್ದಾರೆ. ಫೈನಾನ್ಸಿಯರ್ಸ್‌ನಿಂದಲೂ ತಂದಿದ್ದಾರೆ. ಚಿನ್ನವನ್ನು ಅಡವಿಟ್ಟಿದ್ದಾರೆ. ಹಾಗೆಯೇ ಹಿಂದೆ ಒಂದು ಸಲ 16–07–2001ರಲ್ಲಿ ಮಾನ್ಯ ರವೀಂದ್ರನಾಥ್‌ರವರು ಒಂದು ಚುಕ್ಕೆ ಗುರುತಿನ ಪ್ರಶ್ನೆಯನ್ನು ಹಾಕಿದ್ದರು. ಈ ಸರ್ಕಾರ ಅದಕ್ಕೆ ಉತ್ತರವನ್ನೂ ಸಹಾ ಕೊಟ್ಟಿದ್ದರು. ಅದಕ್ಕೆ ಬಡ್ಡಿಯನ್ನು ಕೊಡುತ್ತೀರಾ ಎಂದು. ಹಾಗೆಯೇ ನಿಯಮಾನುಸಾರವಾಗಿ ಕೊಡಬೇಕಾಗಿರುವ ಬಡ್ಡಿ ದರ ವಾರ್ಷಿಕ 15 ರಷ್ಟಾಗುತ್ತದೆ. ಅಂದರೆ ಬಡ್ಡಿಯನ್ನೂ ಕೂಡ ಕೊಡುತ್ತಾರಾ? ಅದನ್ನು ಎಷ್ಟು ಬೇಗ ಪಾವತಿ ಮಾಡುತ್ತಾರೆ? ಆ ರೈತರ ಸಮಸ್ಯೆಗೆ ನಮ್ಮ ಈ ಸರ್ಕಾರ ಹೇಗೆ ಸ್ಪಂದಿಸುತ್ತದೆಂದು ಹೇಳಬೇಕು.

ಶ್ರೀ ಎಂ. ಮಹಾದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೇ, ಕಬ್ಬಿನ ಬೆಳೆಗಾರರಿಗೆ ಬಾಕಿ ಇರುವ ಷುಗರ್ ಫ್ಯಾಕ್ಟರಿಗಳವರು ನಮ್ಮ ನಿಯಮದ ಪ್ರಕಾರ ಅದನ್ನು 14 ದಿವಸದೊಳಗೆ ಕಬ್ಬಿನ ಬೆಳೆಗಾರರ ಬಾಕಿಯನ್ನು ಚುಕ್ತಾ ಮಾಡಬೇಕೆಂದು ಇದೆ. ಆದರೆ ಆರ್ಥಿಕ ಪರಿಸ್ಥಿತಿ ಮತ್ತು ಅವರ ಸಾಮರ್ಥ್ಯವನ್ನು ನೋಡಿ ನಾವು ಅವರಿಗೆ ಸ್ವಲ್ಪ

ಸಹಾಯವಾಗುವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ ಕಬ್ಬನ್ನು ಅರೆದ ಕೂಡಲೇ ತಕ್ಷಣವೇ ಅವರಿಗೆ ಆರ್ಥಿಕವಾಗಿ ಸಮಸ್ಯೆಗಳು ಇರುತ್ತವೆ. ಬ್ಯಾಂಕ್‌ನಿಂದ ಹಣವನ್ನು ತರಬೇಕಾಗುತ್ತದೆ, ಇತ್ಯಾದಿ. ನಾವು ಅವರಿಗೆ ಆದೇಶವನ್ನು ಕೊಟ್ಟಿದ್ದೇವೆ. ಕಬ್ಬನ್ನು ಫ್ಯಾಕ್ಟರಿಗಳಿಗೆ ಸರಬರಾಜು ಮಾಡಿದ ಕೂಡಲೇ 14 ದಿವಸದಲ್ಲೇ ಕೊಡಬೇಕೆಂದು ನಿಯಮವೂ ಇದೆ. ನಾವು ಆದೇಶವನ್ನೂ ಕೊಟ್ಟಿದ್ದೇವೆ. ಕೆಲವು ಫ್ಯಾಕ್ಟರಿಗಳಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ. ಆದುದರಿಂದ ಕೆಲವು ಫ್ಯಾಕ್ಟರಿಗಳವರು ನಿಧಾನ ಮಾಡುತ್ತಿದ್ದಾರೆ. ಅದರೂ ಸಹ ಅವರು ಬಾಕಿಯನ್ನು ಚುಕ್ತಾ ಮಾಡುತ್ತಿದ್ದಾರೆ. ಆದರೆ ಬಡ್ಡಿ ಸಮೇತ ಕೆಲವನ್ನು ಕೊಡಬೇಕೆಂದು ಒತ್ತಾಯ ಮಾಡುವುದಕ್ಕೂ ಕಷ್ಟವಾಗುತ್ತದೆ. ಕೆಲವು ನಾವು ಬಡ್ಡಿ ಸಮೇತ ಒಂದು-ಎರಡು ಫ್ಯಾಕ್ಟರಿಗಳಲ್ಲಿ ರಾಜ್ಯದಲ್ಲಿ ಬಡ್ಡಿ ಸಮೇತ ಕೊಡಲಿಕ್ಕೆ ನಾವು ಆದೇಶವನ್ನು ಕೊಟ್ಟಿದ್ದೇವೆ. ಅಂಥ ಪ್ರಕರಣಗಳು ಯಾವುದು ಇದೆಯೆಂದರೆ ರೆವಿನ್ಯೂ ರೆಕವರಿಗೆ ಹಾಕಿ ಬಡ್ಡಿ ಸಮೇತ ಕೊಟ್ಟಿದ್ದಾರೆ. ರೆವಿನ್ಯೂ ರೆಕವರಿಗೆ ಹಾಕಿದರೆ ಏನಾಗುತ್ತದೆಂದರೆ ಮತ್ತೆ ಆ ಫ್ಯಾಕ್ಟರಿಗಳು ಚೇತನ ಮಾಡಿಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಅವತ್ತಿನ ಪರಿಸ್ಥಿತಿಯಲ್ಲಿ ಆ ವರ್ಷದಲ್ಲಿ ಮಾತ್ರ ಹೇಗೋ ಮ್ಯಾನೇಜ್ ಮಾಡಬಹುದು. ನಾವು ಮೂರು ಫ್ಯಾಕ್ಟರಿಗಳಿಗೆ ರೆವಿನ್ಯೂ ರೆಕವರಿಗೆ ಹಾಕಿ ಹಣ ಪಾವತಿ ಮಾಡಿಸಿದ್ದೇವೆ. ಮತ್ತೆ ಅವು ತಲೆ ಎತ್ತುವಂಥ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಅದಕ್ಕೋಸ್ಕರ ಆ ಫ್ಯಾಕ್ಟರಿಗಳೂ ಉಳಿಯಬೇಕು. ರೈತರಿಗೂ ಅನುಕೂಲವಾಗಬೇಕು. ಆ ರೀತಿ ನಾವು ವಯಾಮೀಡಿಯಾ ಮಾಡಿಕೊಂಡು ಅಂದರೆ ಒಂದು ಪಾಲಿಸಿ ಮಾಡಿಕೊಂಡು ಅವರ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ನಾವು ಮಾಡುತ್ತಿದ್ದೇವೆ.

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಪ್ರಕಾರ ಬಹುಶಃ ಇವತ್ತು ಎಲ್ಲಾ ಸಕ್ಕರೆ ಕಾರ್ಖಾನೆಗಳು ಅದೇ ರೀತಿಯಾದಂಥ ಒಂದು ಪರಿಸ್ಥಿತಿಯನ್ನು ಅನುಭವಿಸುತ್ತಿದ್ದಾವೆ. ಈ ಒಂದು ನಮ್ಮ ಮಲಪ್ರಭಾ ಸಕ್ಕರೆ ಕಾರ್ಖಾನೆ ಈ ವರ್ಷ ಸುಮಾರು ಏಳು ಕೋಟಿ ರೂ.ಗಿಂತ ಹೆಚ್ಚಿನ ಒಂದು ಮೊತ್ತವನ್ನು ರೈತರಿಗೆ ಬಾಕಿ ಕೊಡಬೇಕಾಗಿದೆ. ಅದಕ್ಕಾಗಿ ಈ ಬಾಕಿಯನ್ನು ಯಾವಾಗ ಕೊಡುತ್ತೀರಿ ಎಂದರೆ ಸಚಿವರು ಮಧ್ಯಮಾವಧಿ ಸಾಲ ಮಂಜೂರಾತಿಯಾಗಿ ಮತ್ತೆ ನಬಾರ್ಡ್‌ಗೆ ಅರ್ಜಿಯನ್ನು ಸಲ್ಲಿಸಿದೆ ಎಂದು ಹೇಳಿದ್ದಾರೆ. ಈಗಾಗಲೇ ಆ ಸಾಲ ಮಂಜೂರಾತಿಯಾಗಿದೆ. ಆದರೆ ಸರ್ಕಾರದವರು ಇಲ್ಲಿಯವರೆಗೆ ಗ್ಯಾರಂಟಿಯನ್ನು ಕೊಟ್ಟಿಲ್ಲ. ಅದಕ್ಕೆ ಯಾವಾಗ ಗ್ಯಾರಂಟಿಯನ್ನು ಕೊಡುತ್ತೀರಿ ಎಂಬುದನ್ನೂ ಹೇಳಬೇಕು ಮತ್ತು ಈಗ ಕೇಂದ್ರ ಸರ್ಕಾರದವರು ಕಬ್ಬು ಬೆಳೆಗಾರರಿಗೆ ವಿಶೇಷವಾದಂಥ ಸಹಾಯಧನ ಎಂದು ಹೇಳಿ ಘೋಷಣೆ ಮಾಡಿದ್ದಾರೆ. ಅದೇ ರೀತಿಯಲ್ಲಿ ರಾಜ್ಯ ಸರ್ಕಾರದವರು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡು ರೈತರ ಸಹಾಯಕ್ಕೆ ಬರುತ್ತಾರೆಯೇ ಎಂದು ಮಾನ್ಯ ಸಚಿವರನ್ನು ನಾನು ತಮ್ಮ ಮುಖಾಂತರ ಕೇಳಬಯಸುತ್ತೇನೆ.

ಶ್ರೀ ಎಂ. ಮಹಾದೇವ್ : ಮಾನ್ಯ ಅಧ್ಯಕ್ಷರೇ, ಈ ಕಾರ್ಖಾನೆ 2003ರವರೆಗೆ ರೈತರು ಪೂರೈಕೆ ಮಾಡಿರುವ ಕಬ್ಬಿನ ಬಿಲ್ ಸುಮಾರು 699.55 ಲಕ್ಷ ರೂ. ಮಾತ್ರ ಪಾವತಿಸಲು ಬಾಕಿ ಇರುತ್ತದೆ. ಹಿಂದಿನ ಅವಧಿಯ ಕಬ್ಬಿನ ಬಿಲ್ ಬಾಕಿ ಪೂರ್ತಿಯಾಗಿ ತೀರುವಳಿ ಮಾಡಿರುತ್ತಾರೆ. ಈ ಬಾಕಿ ಹಣವನ್ನು ತೀರಿಸುವ ಸಲುವಾಗಿ ನಬಾರ್ಡ್‌ನಿಂದ ಮಧ್ಯಮಾವಧಿ ಸಾಲಕ್ಕಾಗಿ ಕಾಯುತ್ತಿದ್ದು ನಾವು ನಬಾರ್ಡ್‌ಗೆ ಅರ್ಜಿಯನ್ನು ಹಾಕಿ ಆ ಸಾಲಕ್ಕಾಗಿ ಕಾಯುತ್ತಿದ್ದೇವೆ. ಆ ಸಾಲ ಮಂಜೂರಾದ

ಕೂಡಲೇ ಡಿಸಿಸಿ ಬ್ಯಾಂಕ್, ಬೆಳಗಾಂ ಮತ್ತು ಸಮೂಹ ಬ್ಯಾಂಕ್ ಸಾಲ ಬಿಡುಗಡೆಯಾದ ಕೂಡಲೇ ಕಬ್ಬಿನ ಬಿಲ್‌ನ್ನು ಬಾಕಿಗೆ ಅದನ್ನು ಬಟವಾಡೆ ಮಾಡಬೇಕೆಂದು ಹೇಳಿ ನಾವು ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇವತ್ತು ದಕ್ಷಿಣ ಕನ್ನಡದ್ದು ನಮ್ಮ ಮಾನ್ಯ ಹಾಲಾಡಿ ಶ್ರೀನಿವಾಸಶೆಟ್ಟರು ಹೇಳಿದ ಪ್ರಕಾರ ಬ್ರಹ್ಮಾವರ ಷುಗರ್ ಫ್ಯಾಕ್ಟರಿ ಇರಬಹುದು. ಮತ್ತು ಮಹಾಂತೇಶ್ ಕೌಜಲಗಿಯವರು ಹೇಳಿದ ಮಲಪ್ರಭಾ ಸಕ್ಕರೆ ಕಾರ್ಖಾನೆ ಇರಬಹುದು. ನಾನು ಹಿಂದೆಯೂ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ನಮ್ಮ ಖಾನಾಪುರದ ಭಾಗ್ಯಲಕ್ಷ್ಮಿ ಷುಗರ್ ಫ್ಯಾಕ್ಟರಿಯ ಬಗ್ಗೆ. ಇವತ್ತು ರೈತರಿಗೆ ಅಲ್ಲಿ 15 ಕೋಟಿರೂ.ಗಿಂತಲೂ ಜಾಸ್ತಿ ಬಾಕಿಯನ್ನು ಕೊಡಬೇಕಾಗಿದೆ. ಕಳೆದ ಒಂದು, ವರ್ಷದಿಂದ ಅವರಿಗೆ ಹಣವನ್ನು ಕೊಟ್ಟಿಲ್ಲ. ಹೀಗಾಗಿ ಬಹಳಷ್ಟು ತೊಂದರೆಯಲ್ಲಿದ್ದಾರೆ. ಒಂದು, ಈ ರೀತಿ ಆ ಫ್ಯಾಕ್ಟರಿಯವರು ಅವರಿಗೆ ಬಿಲ್ ಪೇಮೆಂಟ್ ಮಾಡಲಿಲ್ಲ. ಮತ್ತೊಂದು ಅಲ್ಲಿ ಮಿಸ್-ಅಪ್ರೋಪ್ರಿಯೇಷನ್ ಆಗುತ್ತಿದೆ ಎನ್ನುವಂಥದ್ದು ತಮ್ಮ ಗಮನಕ್ಕೆ ಬಂದಿದೆ. ಆಗ ತಾವು ಅದರ ಬಗ್ಗೆ ತನಿಖೆ ಮಾಡುತ್ತೇವೆಂದು ಹೇಳಿದ್ದಿರಿ. ಆಮೇಲೆ ಒಂದು ಪತ್ರವನ್ನು ಬರೆದಿರಿ. ಏನೆಂದರೆ ಇದು ಸಹಕಾರ ಇಲಾಖೆಗೆ ಸಂಬಂಧಪಟ್ಟದ್ದು. ನನಗೇನೂ ಸಂಬಂಧ ಇಲ್ಲವೆಂದು ಹೇಳಿ. ಅಂದರೆ ತಮ್ಮ ಒಂದು ಜವಾಬ್ದಾರಿಯನ್ನು ತೆಗೆದುಹಾಕುವಂಥದ್ದಲ್ಲ. ಆದರೆ ಸಫರ್ ಆಗುವವರು ಯಾರು? ಆ ಕಬ್ಬು ಬೆಳೆಗಾರರು. ಆ ಭಾಗ್ಯಲಕ್ಷ್ಮಿ ಷುಗರ್ ಫ್ಯಾಕ್ಟರಿಯಲ್ಲೇನು ಮಿಸ್ ಅಪ್ರೋಪ್ರಿಯೇಷನ್ ಆಯಿತು, ಅದರಿಂದ ಇವತ್ತು ರೈತರಿಗೆ ಆ ಬಿಲ್ ಪೇಮೆಂಟ್ ಆಗದೆ 15 ಕೋಟಿ ರೂಪಾಯಿ ಬಾಕಿ ಉಳಿದಿದೆ. ಹೀಗಾಗಿ ತೊಂದರೆಯನ್ನು ಅನುಭವಿಸುವಂಥವರು ರೈತರು, ಅಂದರೆ ಕಬ್ಬು ಬೆಳೆಗಾರರು. ಅದಕ್ಕಾಗಿ ಇದನ್ನು ಇವತ್ತು ನೀವಾಗಲಿ, ಸಹಕಾರ ಸಚಿವರಾಗಲಿ, ಇದಕ್ಕೇನಾದರೂ ಪರಿಹಾರವನ್ನು ಹುಡುಕುವಂಥ ಕೆಲಸ ಆಗಬೇಕಾಗುತ್ತದೆ. ಜವಾಬ್ದಾರಿಯನ್ನು ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಷಿಫ್ಟ್ ಮಾಡುವಂಥದ್ದು ಆಗಬಾರದು. ಅದಕ್ಕಾಗಿ ತಕ್ಷಣವೇ ಖಾನಾಪುರದ ಭಾಗ್ಯಲಕ್ಷ್ಮಿ ಷುಗರ್ ಫ್ಯಾಕ್ಟರಿ ಕಬ್ಬು ಬೆಳೆಗಾರರಿಗೆ 15 ಕೋಟಿ ರೂ. ಬಾಕಿ ಇದೆಯಲ್ಲಾ, ಅದನ್ನೂ ಸಹಿತ ತಕ್ಷಣವೇ ಚುಕ್ತಾ ಮಾಡುವುದಕ್ಕೆ ತಾವು ಕ್ರಮವನ್ನು ಕೈಗೊಳ್ಳಬೇಕು. ಇನ್ನೊಂದು ಮಹಾರಾಷ್ಟ್ರ ಸರ್ಕಾರವೇನು ಒಂದು ನೂರು ರೂಪಾಯಿ ಸಬ್ಸಿಡಿ ಕೊಡುವಂಥದ್ದು ಒಂದು ಕ್ವಿಂಟಾಲ್‌ಗೆ ಕಾರ್ಯಕ್ರಮ ಹಾಕಿಕೊಂಡಿದೆ, ಅದನ್ನು ಇಲ್ಲಿಯೂ ಸಹ ಜಾರಿಗೆ ತರುವ ಕೆಲಸವಾಗಬೇಕಾಗಿದೆ. ಯಾವ ರೀತಿ ನಮ್ಮ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪಾಂಡವಪುರ ಷುಗರ್ ಫ್ಯಾಕ್ಟರಿಗೆ ವಿಶೇಷವಾದದ್ದನ್ನು ಒಂದು ಪುನರುಜ್ಜೀವನ ಸಲುವಾಗಿ ವ್ಯವಸ್ಥೆಯನ್ನು ಮಾಡಿದ್ದಾರೆ, ಅದೇ ರೀತಿ ತಾವು ಉಳಿದಂಥ ಫ್ಯಾಕ್ಟರಿಗಳಿಗೂ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಹಾದೇವ್ : ಮಾನ್ಯ ಅಧ್ಯಕ್ಷರೇ, ನಾನು ಜವಾಬ್ದಾರಿಯಿಂದ ನುಣುಚಿಕೊಳ್ಳುವಂಥ ಪ್ರಯತ್ನವನ್ನು ಮಾಡಿಲ್ಲ. ಏಕೆಂದರೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೊಟ್ಟರೆ ನಾನು ಅದಕ್ಕೆ ವಿವರವಾದ ಉತ್ತರವನ್ನು ಕೊಡುತ್ತೇನೆ. ಆದರೂ ಕೂಡ ಅವರ ಮಾಹಿತಿಗಾಗಿ ತಕ್ಷಣದಲ್ಲೇ ಪ್ರಸ್ತಾಪ ಮಾಡಿರುವುದರಿಂದ ಪಾಲಿಸಿ ಮ್ಯಾಟರ್‌ಗಳು, ಕೇಸ್ ಕಂಟ್ರೋಲ್ ಆರ್ಡರ್ಸ್, ಅಲೋಕೇಷನ್ಸ್ ಇತ್ಯಾದಿ ಇವುಗಳು ನನಗೆ ಬರುತ್ತದೆ. ಈ ಕೋ-ಆಪರೇಟಿವ್ ಷುಗರ್ ಫ್ಯಾಕ್ಟರಿಯಾಗಿರುವುದರಿಂದ ಅಡ್ಮಿನಿಷ್ಟ್ರೇಷನ್ ಅಲ್ಲಿಗೆ ಹೋಗುತ್ತದೆ. 65ರ ಪ್ರಕಾರ ಎನ್‌ಕ್ವೈರಿಯನ್ನು ಮಾಡತಕ್ಕದ್ದು ಅದು ಸಹಕಾರ ಮಂತ್ರಿಗಳಿಗೆ ಬರುವುದರಿಂದ ನಾವು ಅದನ್ನು ತಮ್ಮ ಲೆಟರನ್ನು

ನನಗೆ ಕೊಟ್ಟಿದ್ದೀರಿ. ಅದರ ಮೇಲೆ ಆದೇಶವನ್ನು ಕೊಟ್ಟಿದ್ದೇನೆ. ತಕ್ಷಣವೇ ಇದರ ಬಗ್ಗೆ ಎನ್‌ಕ್ವೈಯರಿಯನ್ನು ಕಂಡಕ್ಟ್ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿ ಆದೇಶವನ್ನು ಕೊಟ್ಟಿದ್ದೇನೆ. ನಾನು ಸಕ್ಕರೆ ಸಚಿವ, ಪಾಲಿಸಿ ಮ್ಯಾಟರ್ ನನ್ನ ಹತ್ತಿರ ಇದೆಯೇ ಹೊರತು ಕೋಆಪರೇಷನ್ ಅದು ಅವರಿಗೆ ಬರುವುದರಿಂದ 64 ಎನ್‌ಕ್ವೈಯರಿಯನ್ನು ಅವರೇ ಮಾಡಬೇಕಾಗುತ್ತದೆ. ನಾನು ಮಾಡುವುದಕ್ಕಂತಾ ಬರುವುದಿಲ್ಲ. ಆದ್ದರಿಂದ ನಾನು ಆ ವಿಚಾರನ್ನು ಹೇಳಿದ್ದೇನೆಯೇ ಹೊರತು ಬೇರೆ ಏನೂ ಹೇಳಿಲ್ಲ. ಎಲ್ಲಾ ಷುಗರ್ ಫ್ಯಾಕ್ಟರಿಗಳಿಗೂ ನಾವು ನೋಟೀಸನ್ನು ಕೊಟ್ಟಿದ್ದೇವೆ. ನೀವು ತಕ್ಷಣ ರೈತರ ಬಾಕಿಯೇನು ಇದೆ, ಅದನ್ನು ಚುಕ್ತಾ ಮಾಡಬೇಕು. ಇಲ್ಲದೇ ಇದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆಂದು ನೋಟೀಸ್ ಕೊಟ್ಟಿದ್ದೇವೆ. ಆದರೆ ನಾವು ಎಲ್ಲಾ ಫ್ಯಾಕ್ಟರಿಗಳಿಗೂ ರೆವಿನ್ಯೂ ರೆಕವರಿಗೆ ಒಂದೇ ಸಾರಿ ಆದೇಶ ಕೊಟ್ಟರೆ ಫ್ಯಾಕ್ಟರಿಗಳ ಅಸ್ತಿತ್ವವೇ ಹೊರಟು ಹೋಗುತ್ತದೆ; ನಾವು ಮೂರು ಫ್ಯಾಕ್ಟರಿಗಳ ಮೇಲೆ ಪ್ರಯೋಗ ಮಾಡಿ ಈಗಾಗಲೇ ಅವು ತಲೆ ಎತ್ತುವಂತಹ ಒಂದು ಪರಿಸ್ಥಿತಿಯಲ್ಲಿ ಇಲ್ಲ. ಈಗ ಕೇಂದ್ರ ಸರ್ಕಾರದಿಂದ ಸಕ್ಕರೆ ಸ್ಟಾಕ್ ಇರತಕ್ಕಂಥ ಬಗ್ಗೆ ಆದೇಶವನ್ನು ಕೊಟ್ಟರೆ ಅಂದರೆ ಸೇಲ್ ಮಾಡಿ ಎಂದು ಆದೇಶವನ್ನು ಕೊಟ್ಟರೆ ಸೇಲ್ ಮಾಡಬಹುದು. ಕೆಲವು ಬ್ಯಾಂಕ್‌ಗಳಿಂದ ಲೋನ್ ತೆಗೆದುಕೊಂಡಿದ್ದಾರೆ. ಅದೂ ಕೈಗೆ ಬಂತು ಅಂದರೆ ಕ್ಲಿಯರ್ ಮಾಡುವುದಕ್ಕೆ ಅನುಕೂಲ ಆಗುತ್ತದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ಈಗ ಸಕ್ಕರೆ ಉದ್ಯಮ ಇಡೀ ರಾಷ್ಟ್ರದಲ್ಲಿ ಸಂಕಷ್ಟದಲ್ಲಿರತಕ್ಕಂತಹದ್ದು ಎಲ್ಲರಿಗೂ ತಿಳಿದಿರತಕ್ಕಂಥ ವಿಚಾರ. ನಮ್ಮ ರಾಜ್ಯ ಸರ್ಕಾರ ರಾಜ್ಯದಲ್ಲಿ ಈ ಒಂದು ಸಕ್ಕರೆ ಉದ್ಯಮದ ನೆರವಿಗೆ ಬರಲಿಕ್ಕೆ ಒಂದು ಸಕ್ಕರೆ ಅಭಿವೃದ್ಧಿ ನಿಧಿ ಸ್ಥಾಪನೆ ಮಡತಕ್ಕಂಥ ಪ್ರಸ್ತಾವನೆ ಇದೆ ಎಂದು ನಾನು ಕೇಳಿದ್ದೇನೆ. ಆ ಒಂದು ಪ್ರಸ್ತಾವನೆ ಇದ್ದಲ್ಲಿ ಆ ಅಭಿವೃದ್ಧಿ ನಿಧಿಯನ್ನು ಯಾವಾಗ ಸ್ಥಾಪನೆ ಮಾಡಲಾಗುತ್ತದೆ? ಈ ಒಂದು ಅಭಿವೃದ್ಧಿ ನಿಧಿಯಲ್ಲಿ ರೈತರಿಗೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಈ ಒಂದು ಸಂಕಷ್ಟದಿಂದ ಹೊರ ಬರತಕ್ಕಂಥ ಅಂಶಗಳು ಏನಾದರೂ ಇದ್ದರೆ ತಿಳಿಸಬೇಕು ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ. ಮೊನ್ನೆಯ ದಿವಸ ಚರ್ಚೆ ಆಯಿತು. ಕೇಂದ್ರ ಸರ್ಕಾರದಿಂದ ಪ್ಯಾಕೇಜ್ ಕೊಡಬೇಕು. ಎಂದು ಪ್ರಸ್ತಾಪ ಆಯಿತು.

ಅಧ್ಯಕ್ಷರು : ಉತ್ತರ ಸ್ವಲ್ಪ ಬ್ರೀಫಾಗಿ ಕೊಡಿ. ನಿಮಗೂ ಅಷ್ಟೆ; ನೀವು ಒಂದಕ್ಕೊಂದು ಪೋಣಿಸಿಕೊಂಡು ಹೋಗಬೇಡಿ. ಯಾವುದಾದರೂ ಸಿಂಪಲ್ ಆಗಿ ಬ್ರೀಫ್ ಆಗಿ ಕೇಳಿ.

ಶ್ರೀ ಎಂ.ಎಸ್. ಆತ್ಮಾನಂದ : ಸಕ್ಕರೆ ಅಭಿವೃದ್ಧಿ ನಿಧಿ ವಿಚಾರ ಹೇಳಲಿ.

ಅಧ್ಯಕ್ಷರು : ತಾವು ಬ್ರೀಫಾಗಿ ಉತ್ತರ ಹೇಳಿ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಇದು ಪ್ರತ್ಯೇಕವಾದಂತಹ ಪ್ರಶ್ನೆ ಆಗುತ್ತದೆ. ನಾನೆಲ್ಲಾ ಸವಿವರವಾದ ಉತ್ತರ ಕೊಡಬಹುದು. ಆದರೆ ಸಕ್ಕರೆ ಅಭಿವೃದ್ಧಿ ನಿಧಿಗೆ ರಾಜ್ಯ ಸರ್ಕಾರ 25 ಕೋಟಿ ರೂಪಾಯಿ ಮಾಡಿದ್ದೇವೆ. ಮತ್ತೆ ಜಾಸ್ತಿ ಮಾಡಬೇಕು ಎಂದರೆ ನಾವು ಕೇಂದ್ರ ಸರ್ಕಾರದ ಜೊತೆ ನೆಗೋಷಿಯೇಟ್ ಮಾಡಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಈ ಬಗ್ಗೆ ಪ್ರಶ್ನೆ ಹಾಕಿದರೆ ಸವಿವರವಾದಂತಹ ಉತ್ತರವನ್ನು ಕೊಡುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಕ್ಕರೆ ಮಂತ್ರಿಗಳು ಮಧ್ಯಮಾವಧಿ ಸಾಲವಾಗಿ ಪರಿವರ್ತಿಸಲಿಕ್ಕೆ ನಬಾರ್ಡ್‌ಗೆ ಪ್ರಪೋಸಲ್ ಕಳುಹಿಸಿ ನಬಾರ್ಡ್‌ನಿಂದ ಮಂಜೂರಾತಿಯನ್ನು

ಪಡೆಯಬೇಕು ಎಂದು ಹೇಳಿದ್ದೀರಿ. ಮಹಾರಾಷ್ಟ್ರದಲ್ಲಿ ಸರ್ಕಾರವೇ ಮುತುವರ್ಜಿ ವಹಿಸಿ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಏನು ಡೆಫಿಸಿಟ್ ಆಗಿತ್ತು. ಆ ಡಿಫಿಸಿಟ್ ಆದಂತಹ ದುಡ್ಡನ್ನು ಮಧ್ಯಮಾವಧಿ ಸಾಲವಾಗಿ ಪರಿವರ್ತಿಸಲಿಕ್ಕೆ ಸರ್ಕಾರ ಪೂರ್ತಿ ಗ್ಯಾರಂಟಿ ಕೊಟ್ಟು ಅಲ್ಲಿ ಮಧ್ಯಮಾವಧಿ ಸಾಲವಾಗಿ ಪರಿವರ್ತನೆ ಮಾಡಿದ್ದಾರೆ. ಆ ರೀತಿ ಏಕೆ ಕರ್ನಾಟಕದಲ್ಲಿ ಮಾಡಬಾರದು? ಈಗಾಗಲೇ ಎಂ.ಕೆ. ಹುಬ್ಬಳ್ಳಿ, ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ, ಅದೇ ರೀತಿ ಘಟಪ್ರಭಾದ ಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಬಾರ್ಡ್‌ನಿಂದ ಮಂಜೂರಾತಿಯನ್ನು ಪಡೆದು ಎರಡು ಮೂರು ತಿಂಗಳಾಯಿತು. ಅದಕ್ಕೆ ಇನ್ನೂ ಗವರ್ನ್‌ಮೆಂಟ್ ಗ್ಯಾರಂಟಿ ಕೊಡದೇ ಇರುವುದರಿಂದ ಮಧ್ಯಮಾವಧಿ ಸಾಲವಾಗಿ ಪರಿವರ್ತನೆ ಆಗಲು ಸಾಧ್ಯವಾಗುತ್ತಿಲ್ಲ. ರೈತರು ಸಂಕಷ್ಟದಲ್ಲಿದ್ದಾರೆ. ಕೂಡಲೇ ಗವರ್ನಮೆಂಟ್ ಗ್ಯಾರಂಟಿ ಕೊಡುವಂತಹ ವ್ಯವಸ್ಥೆ ಆಗಬೇಕು. ಏಕೆಂದರೆ ಈಗಾಗಲೇ ಮಂಜೂರಾತಿ ಆಗಿ ಮೂರು ತಿಂಗಳು ಆಯಿತು. ಎಂ.ಕೆ. ಹುಬ್ಬಳ್ಳಿ, ಘಟಪ್ರಭಾ ಈ ಸಕ್ಕರೆ ಕಾರ್ಖಾನೆಗಳಿಗೆ ಮಧ್ಯಮಾವಧಿ ಸಾಲವಾಗಿ ಪರಿವರ್ತನೆ ಆಗಿದೆ. ಅದಕ್ಕೆ ಸರ್ಕಾರ ಗ್ಯಾರಂಟಿ ಕೊಡಬೇಕಾಗಿದೆ. ಸರ್ಕಾರದಲ್ಲಿ ಮೂರು ತಿಂಗಳಿಂದ ಪೆಂಡಿಂಗ್ ಇದೆ. ದುಡ್ಡು ಬಿಡುಗಡೆ ಆಗಿಲ್ಲ. ರೈತರು ತೊಂದರೆಯಲ್ಲಿದ್ದಾರೆ. ಕೂಡಲೇ ಅವರಿಗೆ ಸಹಾಯ ಮಾಡುವಂತಹ ಕ್ರಮಗಳು ಆಗಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ಮಹಾದೇವ್ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಾವು ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಎರಡನೆಯದಾಗಿ ಈ ಸಂಕಷ್ಟದಲ್ಲಿರತಕ್ಕಂತಹ ಷುಗರ್ ಫ್ಯಾಕ್ಟರೀಸ್‌ಗಳು ಏನು ಇದ್ದಾವೆ ಅವಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿದ್ದಾರೆ. ಅಲ್ಲಿಂದ ರಿಪೋರ್ಟ್ ಬಂದ ಕೂಡಲೇ ಅದರ ಬಗ್ಗೆ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ನಾನು ಅಧ್ಯಕ್ಷನಾಗಿದ್ದೆ. ಆಗ ಒಂದು ಐದು ಕೋಟಿ ರೂಪಾಯಿಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಾಫ್ಟ್ ಲೋನ್ ಕೊಡಲಿಕ್ಕೆ ಸಲ್ಲಿಸಿದ್ದೆ. ಒಂದು ಅಭಿಪ್ರಾಯ ಬಂತು. ನಾನು ರಾಜೀನಾಮೆ ಕೊಟ್ಟರೆ ಹಣವನ್ನು ಕೊಡುತ್ತಾರೆ ಎಂದು ಅಭಿಪ್ರಾಯ ಬಂತು. ಅದಕ್ಕೆ ನಾನು ರಾಜೀನಾಮೆಯನ್ನು ಕೊಟ್ಟಿದ್ದೇನೆ. ಆದರೆ ನಂತರ ಕೊಟ್ಟಂತಹುದು ಒಂದು ಕೋಟಿ 92 ಲಕ್ಷ ರೂಪಾಯಿ ಮಾತ್ರ. ಬಾಕಿ ಹಣವನ್ನು ಸರ್ಕಾರ ಯಾವಾಗ ಕೊಡುತ್ತಾರೆ ಎಂಬುದನ್ನು ಹೇಳಬೇಕು. ಮತ್ತೆ ಈ ಸಕ್ಕರೆ ಕಾರ್ಖಾನೆ ಬಗ್ಗೆ ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಸಕ್ಕರೆ ಕಾರ್ಖಾನೆಗಳು ರೈತರ ಹಣವನ್ನು ಪಾವತಿ ಮಾಡದೇ ಇದ್ದರೆ ಅಲ್ಲಿ ಗೋಡೌನ್‌ನಲ್ಲಿರುವ ಸಕ್ಕರೆಯನ್ನು ಆಕ್ಷನ್ ಮಾಡಿ ಪೇಮೆಂಟ್ ಮಾಡಿಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದರು. ಈಗ ಎಲ್ಲಾ ಗೋಡೌನುಗಳೂ ಸಹ ಡಿಸಿಸಿ ಬ್ಯಾಂಕ್‌ಗಳಿಗೆ ಫ್ಲೆಡ್ಜ್ ಆಗಿವೆ. ಅದರಲ್ಲಿ ಮಾರಿದರೆ ನಿಮಗೇನೂ ಹಣ ಸಿಗುವುದಿಲ್ಲ. ಅದಕ್ಕೆ ಪರ್ಯಾಯ ವ್ಯವಸ್ಥೆ ಏನು ಮಾಡುತ್ತಾರೆ? ಏಕೆಂದರೆ ಫ್ಲೆಡ್ಜ್ ಆದ ಸಕ್ಕರೆಯನ್ನು ಪುನಃ ಸರ್ಕಾರ ಆಕ್ಷನ್ ಮಾಡಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಬ್ಯಾಂಕ್‌ಗಳಿಗೆ ಅದು ಹೋಗುತ್ತದೆ. ಅದನ್ನು ಏನು ಮಾಡುತ್ತಾರೆಂಬುದನ್ನು ಹೇಳಬೇಕು.

ಅಧ್ಯಕ್ಷರು : 2–3 ಸಪ್ಲಿಮೆಂಟರೀಸ್ ಕೇಳಿದರೆ ಹೇಗೆ?

ಶ್ರೀ ಎಂ. ಮಹಾದೇವ್ : 22 ಕೋಟಿ ರೂಪಾಯಿಯನ್ನು ಸರ್ಕಾರ ಅಲ್ಲಿಗೆ ಕೊಟ್ಟಿದೆ. ಇನ್ನು ಬಾಕಿ ಬಗ್ಗೆ ಅರ್ಜಿ ಬಂದರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸಚಿವರು ಉತ್ತರದಲ್ಲಿ ಏನು ತಿಳಿಸಿದ್ದಾರೆ ಎಂದರೆ ದಕ್ಷಿಣ ಕನ್ನಡದ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ ಇದರ ಕಬ್ಬು ಅರೆಯುವಿಕೆಗೆ ಪ್ರಾರಂಭದಿಂದಲೂ ಅರೆತಕ್ಕ ಬೇಕಾದಷ್ಟು ಪ್ರಮಾಣದ ಕಬ್ಬು ದೊರೆಯದ ಕಾರಣ ಕಾರ್ಖಾನೆಯು ಪ್ರಾರಂಭದಿಂದಲೂ ನಷ್ಟವನ್ನು ಹೊಂದುತ್ತಾ ಬಂದಿರುತ್ತದೆ. ಹೀಗಾಗಿ ಕಾರ್ಖಾನೆಗೆ ತೀವ್ರವಾದ ಆರ್ಥಿಕ ತೊಂದರೆ ಉಂಟಾಗಿದೆ ಎನ್ನುವುದನ್ನು ತಾವು ಹೇಳಿದ್ದೀರಿ. ಯಾವ ರೈತ ಅದನ್ನು ಬೆಳೆಸಲಿಕ್ಕೆ ಬೇಕಾದಂತಹ ಸಂದರ್ಭದಲ್ಲಿ ಮತ್ತು ಬೆಳೆಸಿದಂತಹ ಸಂದರ್ಭಗಳಲ್ಲಿ ಅವನು ತಂದ ಕಬ್ಬಿನ ಮರು ಪಾವತಿ ಮಾಡುವುದಕ್ಕೆ ಆಗದಿದ್ದರೆ ಮತ್ತೆ ಅವನು ಪುನಃ ಬೆಳೆಸಲಿಕ್ಕೆ ತಾವೇನು ಪ್ರೇರಣೆ ಅವನಿಗೆ ಕೊಡುತ್ತೀರಿ? ಅವನ ಸಕ್ಕರೆ ಕಾರ್ಖಾನೆ ಹೇಗೆ ನಷ್ಟದಿಂದ ಲಾಭದ ಕಡೆಗೆ ಬರಲು ಸಾಧ್ಯ? ಇದಕ್ಕೆ ನೀವು ಹಮ್ಮಿಕೊಂಡಿರುವಂತಹ ಕಾರ್ಯಕ್ರಮಗಳು ಏನು? ಹೆಚ್ಚು ಕಬ್ಬು ಪಡೆದುಕೊಳ್ಳಲಿಕ್ಕೆ ನೀವು ಹಮ್ಮಿಕೊಂಡಂತಹ ಕಾರ್ಯಕ್ರಮಗಳು ಏನು ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಮಹಾದೇವ್ : ಈಗ ಕೇನ್‌ನ ಸಮಸ್ಯೆ ಸ್ವಲ್ಪ ಇತ್ತು. ಈಗ ಹೊಸ ಯೋಜನೆ, ವರಾಹಿ ಯೋಜನೆ ಬಂದಿದೆ. ಅದು ಬಂದ ಕೂಡಲೇ ಕಬ್ಬಿನ ಪ್ರಮಾಣ ಇಂಪ್ರೂವ್ ಆಗುತ್ತದೆ. ಮತ್ತೆ ಎರಡನೆಯ ವಿಚಾರ ಎಂದರೆ ಫ್ಯಾಕ್ಟರಿ ಚೆನ್ನಾಗಿ ನಡೆಯಬೇಕಾಗಿದ್ದರೆ ಡಿಸ್ಟಿಲರಿ, ಎಥನಾಲ್ ಕೋ-ಜನರೇಷನ್ ಇದನ್ನು ನೀವು ಹಾಕಿಕೊಂಡು ಇಂಪ್ರೂವ್‌ಮೆಂಟ್ ಮಾಡಿ ಎಂದು ಹೇಳಿದ್ದೇವೆ.

ಅಧ್ಯಕ್ಷರು : ಮಾನ್ಯ ಗುರುಸ್ವಾಮಿಯವರು ಕೇಳಿ, ಸಪ್ಲಿಮೆಂಟರಿಗೆ ಅವಕಾಶ ಇಲ್ಲ. ಒಂದಕ್ಕೊಂದು ಪೋಣಿಸಿಕೊಂಡು ಹೋಗಬೇಡಿ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಮ್ಮದು ಬ್ರಹ್ಮಾವರ, ಉಮೇಶ್ ಕತ್ತಿಯವರ ಬೆಳಗಾವಿ ಜಿಲ್ಲೆ, ಮೈಸೂರು ಜಿಲ್ಲೆಯ ಪ್ರಶ್ನೆ ಅಲ್ಲವೇ ಅಲ್ಲ. ದಯಮಾಡಿ ತಾವು ಮಂತ್ರಿಗಳು ಕೇಳಬೇಕು. ತಮ್ಮ ಮುಖಾಂತರ ಅವರನ್ನು ಕೇಳುತ್ತೇನೆ. ಸುಪ್ರೀಂ ಕೋರ್ಟ್‌ನಲ್ಲಿ ಒಂದು ಜಡ್ಜ್‌ಮೆಂಟ್ ಬಂದಿದೆ. ಸುಮಾರು ಒಂದು ವರ್ಷದ ಹಿಂದೆ ಎಂದು ಕಾಣುತ್ತದೆ. ಅದೇನೆಂದು ಹೇಳಿದರೆ Wherever the public money is involved, either through share or by Government, if they do not make payment, they attract Section 420 of the IPC ಎನ್ನತಕಂಥಹ ತೀರ್ಮಾನ ಬಂದಿದೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದು ಒಂದನೆಯ ಪ್ರಶ್ನೆ.

ಅಧ್ಯಕ್ಷರು : ಎರಡನೆಯ ಪ್ರಶ್ನೆ ಬೇಡಿ. ಒಂದು ಪ್ರಶ್ನೆ ಸಾಕು. ನೀವು ಪ್ರಮುಖ ಪ್ರಶ್ನೆದಾರರು ಅಲ್ಲ.

ಶ್ರೀ ಎ.ಎಸ್.ಗುರುಸ್ವಾಮಿ : ನನಗೆ ಒಂದು ಪ್ರಶ್ನೆ ಸಾಕಾಗುವುದಿಲ್ಲ ಸಾರ್.

ಅಧ್ಯಕ್ಷರು : ನೀವು ಒಂದು ಸಪ್ಲಿಮೆಂಟರ್ ಕೇಳಿ ಸಾಕು. You are not the main Questioner.

ಶ್ರೀ ಎ.ಎಸ್. ಗುರುಸ್ವಾಮಿ : ಇದು ಸ್ಟೇಟ್‌ಗೇ ಸಂಬಂಧಪಟ್ಟಿದ್ದು.

ಅಧ್ಯಕ್ಷರು : ಮೈನ್ ಕ್ವೆಶ್ಚನೇರ್ ಎರಡು ಪ್ರಶ್ನೆ ಕೇಳಬಹುದು. I have no objection. You are not the main questioner.

ಶ್ರೀ ಎ.ಎಸ್.ಗುರುಸ್ವಾಮಿ : ಇದು ಇಡೀ ಸ್ಟೇಟ್‌ಗೇ ಸಂಬಂಧಪಟ್ಟ ಪ್ರಶ್ನೆ. ನನ್ನದೊಂದು ಪ್ರಶ್ನೆ ಇದೆ ಸಾರ್. ಈಗ ಅಲ್ಲೊಬ್ಬರು ಸಕ್ಕರೆ ಮಂತ್ರಿಗಳು ಇದ್ದಾರೆ.

ಅಧ್ಯಕ್ಷರು : ಈಗಾಗಲೇ 13 ನಿಮಿಷ ಸಮಯ ತೆಗೆದುಕೊಂಡಿದೆ.

ಶ್ರೀ ಎ.ಎಸ್.ಗುರುಸ್ವಾಮಿ : ಅವರೂ ಪ್ರಶ್ನೆಗೆ ಉತ್ತರ ಕೊಟ್ಟಿದ್ದು ಇದೇನೆ; ಇವರು ಕೊಡುತ್ತಿರುವುದೂ ಅದೇನೇ. ಎರಡೂ ಸಿಮಿಲಾರಿಟಿ ನನಗೆ ಕಾಣುತ್ತಿದೆ. ನಾನು ಐದು ವರ್ಷದ ರಿಪೋರ್ಟ್‌ನ್ನು ಕುಳಿತು ಓದಿದ್ದೇನೆ. ನಾನು ಸುಮ್ಮನೆ ಡಿಬೇಟ್ ಮಾಡುವುದಕ್ಕೆ ಬರುವುದಿಲ್ಲ. ಅಲ್ಲೂ ಕೂಡ ಇದೇ ತರಹ ಉತ್ತರ ಕೊಟ್ಟಿದ್ದಾರೆ. similarity of the answers of the same that, what is the change? ಆದ್ದರಿಂದ ಮಾನ್ಯ ಮಂತ್ರಿಗಳು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಗ್ಗೆ ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದ ಪಕ್ಷದಲ್ಲಿ Why don't you invoke that order also for the beneift of the ಕಬ್ಬು ಬೆಳೆಗಾರನಿಗೋಸ್ಕರ.

ಶ್ರೀ ಎಂ. ಮಹಾದೇವ್ : ಕಡತದಲ್ಲಿ ಬಂದಿದೆಯೇ ನೋಡುತ್ತೇನೆ. ಮತ್ತೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಗುರುಸ್ವಾಮಿಯವರು ಸರಿಯಾಗಿ ಹೇಳಿದ್ದಾರೆ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಬಡ್ಡಿ ಸಮೇತ ಸರ್ಕಾರ ಕೊಡಬೇಕಾಗುತ್ತದೆ. ಬಡ್ಡಿ ಕೊಡದೇ ಇದ್ದರೆ ಕಂಟೆಫ್ಟ್ ಆಗುತ್ತದೆ.

ಅಧ್ಯಕ್ಷರು : ನಾನು ಬೇರೆ ಪ್ರಶ್ನೆ ಕೇಳಿ ಎಂದು ಹೇಳಿದ್ದೇನೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಪರಿಸ್ಥಿತಿ ಎಂದರೆ ಕಬ್ಬಿನ ಪೂರೈಕೆ ಆಗುವುದಿಲ್ಲ. 1983ನೇ ಇಸವಿಯಲ್ಲಿ ಮಾಜಿ ಮುಖ್ಯಮಂತ್ರಿಗಳು ಆಗಿದ್ದಂತಹ ದಿವಂಗತ ಗುಂಡೂರಾವ್ ಅವರು ಇರುವಾಗ ಅದರ ಶಂಕು ಸ್ಥಾಪನೆ ಮಾಡಿದ್ದರು. 1985ನೇ ಇಸವಿಗೆ ಪ್ರಾರಂಭ ಆಯಿತು. ಪೂರಕವಾಗಿ ವರಾಹಿ ಯೋಜನೆಯನ್ನು 1980ನೇ ಇಸವಿಯಲ್ಲಿ ಹಾಕಿಕೊಂಡಿದ್ದರು. ಅದು ಹೇಗೆ ಸಾರ್? ವರಾಹಿ ಯೋಜನೆ ಸಹ ಆಗಲಿಲ್ಲ. ನಮ್ಮ ನತದೃಷ್ಟ, ರೈತರ ಬಾಕಿ ವಿಚಾರ ಗೊತ್ತಿಲ್ಲ. ಷುಗರ್ ಫ್ಯಾಕ್ಟರೀಸ್ ಕುಂಠಿತವಾಗಿ ನಡೆಯುತ್ತಿದೆ. ಒಂದು ರಾಜ್ಯ ಸರ್ಕಾರ ಬಂದಾಗ ಕೇಂದ್ರ ಸರ್ಕಾರ ಬೇರೆ, ಇವರ ಸಮಸ್ಯೆಯೊಳಗೆ ರೈತರು ಕಷ್ಟದಲ್ಲಿದ್ದಾರೆ. ನಮ್ಮ ರಾಜ್ಯದ ಮಟ್ಟಿಗೆ, ನಮ್ಮ ಜಿಲ್ಲೆಯ ಮಟ್ಟಿಗೆ ಯಾವುದೇ ಲಾಭದಾಯಕ ಕೆಲಸಕ್ಕೆ ಯಾರ ಪ್ರೋತ್ಸಾಹವೂ ಬೇಡ. ನೀವು ಸರಿಯಾಗಿ ರೇಟ್ ಕೊಟ್ಟರೆ ಸಾಕು. ಇದರ ನಾಲ್ಕು ಪಟ್ಟು ಕಬ್ಬು ಕೊಡುತ್ತೇವೆ. ನಮ್ಮ ಕಬ್ಬು ತೆಗೆದುಕೊಳ್ಳಿ ಎಂದು ಒತ್ತಾಯ ಮಾಡುತ್ತಾರೆ. ಹಣ ಪೂರೈಕೆ ಮಾಡದಿದ್ದರೆ ಯಾರು ಕೊಡುತ್ತಾರೆ? ನಮ್ಮ ರಾಜ್ಯದಲ್ಲಿ ಗೊತ್ತುಂಟು. ವೈನ್ ಶಾಪ್ ತೆಗೆಯಲು 10 ಸಾವಿರ ಕೊಟ್ಟರೆ ಮಾಡುವವರು ಇದ್ದಾರೆ. ನಮ್ಮಲ್ಲಿ ಪ್ರೋತ್ಸಾಹ ಸಹ ಬೇಡ. ಸರಿಯಾಗಿ ನಾವೇನು ಪೂರೈಕೆ ಮಾಡಿದ್ದೇವೆ ಅದಕ್ಕೆ ಸರಿಯಾಗಿ ಹಣ ಪಾವತಿ ಮಾಡಿದರೆ ಸಾಕು. ಅದನ್ನು ಸರ್ಕಾರ ಪಾವತಿ ಮಾಡದಿದ್ದಾಗ ಹೇಗೆ ಕಬ್ಬು ಬೆಳೆಯುತ್ತಾರೆ? ಇವತ್ತು ಅಡಿಕೆಯ ಪರಿಸ್ಥಿತಿ ನೋಡಿ. ಒಳ್ಳೆಯ ರೇಟು ಬಂತು, ರೈತರು ಬೆಳೆದಿದ್ದಾರೆ. ಹಾಗೆ ನೀವು ಸರಿಯಾಗಿ ಹಣ ಕೊಟ್ಟರೆ ರೈತರು ಬೆಳೆಯುತ್ತಾರೆ.

ಶ್ರೀ ಎಂ. ಮಹಾದೇವ್ : ಈಗ ಅವರ ಬ್ರಹ್ಮಾವರ ಷುಗರ್ ಫ್ಯಾಕ್ಟರಿಗೆ 1,92 ಕೋಟಿ ರೂಪಾಯಿ ಹಣವನ್ನು ಸರ್ಕಾರ ಮಂಜೂರಾತಿ ಮಾಡಿ ಕೊಟ್ಟಿದೆ. ಅದರ ಇಂಪ್ರೂವ್‌ಮೆಂಟ್ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಅವರ ಬೇಡಿಕೆ ಮತ್ತೇನಾದರೂ ಬಂದರೆ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನಲ್ಲ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಹಳೆಯ ಯಂತ್ರವನ್ನು ತಂದು ಒಂದು ಕಾರ್ಖಾನೆ ಮಾಡಿದ್ದಾರೆ. ಅದು ಏನಾಗಿದೆ ಅಂದರೆ ಆ ಯಂತ್ರಗಳು ನಿವೃತ್ತಿಯನ್ನು ಅಪೇಕ್ಷೆ ಮಾಡುತ್ತಿವೆ. ಯಂತ್ರಗಳು ನಮಗೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ನಮಗೆ ನಿವೃತ್ತಿ ಕೊಡಿ ಎಂದು ಹೇಳುತ್ತಿವೆ. ಆ ಹಳೆಯ ಯಂತ್ರದಲ್ಲಿ ನೀವು ಹೇಗೆ ಲಾಭದಾಯಕವಾಗಿ ಮಾಡುತ್ತೀರಿ?

ಶ್ರೀ ಎಂ. ಮಹಾದೇವ್ : ನೀವು ಆ ಕಡೆ ತಿರುಗಿ ಮಾತನಾಡಬೇಡಿ. ಅಧ್ಯಕ್ಷರ ಕಡೆಗೆ ತಿರುಗಿ ಮಾತನಾಡಿ. ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ಅದನ್ನು ಎನ್‌ಕ್ವೈರಿ ಮಾಡುತ್ತೇನೆ. ಅಲ್ಲಿ ಯಾರು ಹಳೆಯ ಮೆಷಿನ್ ತಂದು ಹಾಕಿದ್ದಾರೆ, ಅವರನ್ನೂ ಪತ್ತೆ ಮಾಡಿ ಕೊಟ್ಟರೆ ಅವರ ಮೇಲೆ ಕ್ರಮವನ್ನೂ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗಾಗಲೇ ಈ ಪ್ರಶ್ನೆಗೆ ಹದಿನೈದು ನಿಮಿಷಗಳಾಗಿವೆ. ನಮ್ಮ ರೂಲ್ಸ್ ಪ್ರಕಾರ ಎರಡು ಸಪ್ಲಿಮೆಂಟರಿಗಳನ್ನು ಮಾತ್ರ ಕೇಳಬಹುದಾಗಿದೆ. ನೀವು ಭಾಷಣ ಮಾಡುತ್ತಿದ್ದರೆ, I can't allow. ಅವರು ಎನ್‌ಕ್ವೈರಿ ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲಾ ಈಗ ರೇವುನಾಯಕ್ ಬೆಳಮಗಿಯವರು ಹೇಳಬೇಕು.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಕಬ್ಬು ಬೆಳೆಗಾರರಿಗೆ ಹಣ ಬಂದರೆ ಸಾಕು. ನೀವು ಖಾಸಗಿಯವರಿಗೆ ಕೊಡಿ.

ಶ್ರೀ ರೇವುನಾಯಕ್ ಬೆಳಮಗಿ : ಕಬ್ಬು ಬೆಳೆಗಾರರ ಪ್ರಶ್ನೆ ಬಹಳ ದೊಡ್ಡದು. ಈ ಕಡೆಯ ಕಬ್ಬು ಬೆಳೆಗಾರರು ಕೆರೆಯಿಂದ ಕಬ್ಬು ಬೆಳೆಯಬಹುದು. ಆದರೆ, ನಮ್ಮ ಕಡೆ ಬಾವಿ ತೋಡಿಸಿ, ವಿದ್ಯುತ್ ಸರಬರಾಜು ಮಾಡಿ ಕಬ್ಬು ಬೆಳೆಯಲು ಬಹಳ ತೊಂದರೆಯಿದೆ. 1994ರಿಂದಲೂ ಆಳಂದ ಸಕ್ಕರೆ ಕಾರ್ಖಾನೆ ಮತ್ತು ಇನ್ನೊಂದು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಹಣ ಮರುಪಾವತಿಯಾಗಿಲ್ಲ. ಹಣಕ್ಕಾಗಿ ಇಲ್ಲಿಯ ತನಕವೂ ಕಾಯುತ್ತಿದ್ದಾರೆ. ಜೊತೆಗೆ.....

Mr. Speaker : No supplimentary. ನೀವು ಉತ್ತರ ಹೇಳಿ.

ಶ್ರೀ ಎಂ. ಮಹಾದೇವ್ : ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿ ಶಾದಿ ಮಹಲ್‌ಗಳ ನಿರ್ಮಾಣ

463(4365) **ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿ ನಗರ)** : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ಸ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ 2002–03 ಹಾಗೂ 2003–04ರಲ್ಲಿ ಎಲ್ಲೆಲ್ಲಿ ಶಾದಿ ಮಹಲ್‌ಗಳನ್ನು ನಿರ್ಮಿಸಲಾಗಿದೆ;

ಆ) ಇದಕ್ಕಾಗಿ ಖರ್ಚಾದ ಹಣವೆಷ್ಟು;

ಇ) 2003–04ನೇ ಸಾಲಿನಲ್ಲಿ ಎಷ್ಟು ಶಾದಿ ಮಹಲ್‌ಗಳನ್ನು ಬೆಂಗಳೂರು ನಗರದಲ್ಲಿ ನಿರ್ಮಿಸಲಾಗುವುದು;

ಈ) ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ 2003–04ರಲ್ಲಿ ಶಾದಿಮಹಲ್ ನಿರ್ಮಿಸಲಾಗುವುದೇ?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ಸ್ ರಾಜ್ಯ ಸಚಿವರು) :

ಅ) ಮತ್ತು ಆ) 2002–03 ಮತ್ತು 2003–04ರಲ್ಲಿ ಈ ಕೆಳಕಂಡ ಸಂಸ್ಥೆಗಳಿಂದ ಬೆಂಗಳೂರು ನಗರದಲ್ಲಿ ಎರಡು ಶಾದಿ ಮಹಲ್‌ಗಳು ನಿರ್ಮಾಣವಾಗುತ್ತಿವೆ.